ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ ಜಿಲ್ಲೆ

# ಕೃಷಿ ದರ್ಪಣ

## ಮಾಸಿಕ ಸುದ್ದಿ ಪತ್ರಿಕೆ

ಸಂಪುಟ–3 ನವೆಂಬರ, 2020 ಮಾಸಿಕ ಪತ್ರಿಕೆ ಸಂಚಿಕೆ–11

## ಉತ್ತಮ ಆರೋಗ್ಯಕ್ಕಾಗಿ ಪೌಷ್ಟಿಕ ತೋಟ ಮಾಡಿ



ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ವತಿಯಿಂದ ದಿನಾಂಕ 20-11-2020 ಶುಕ್ರವಾರದಂದು ಮುಂಡರಗಿ ತಾಲೂಕಿನ ಶಿಂಗಟರಾಯನಕೇರಿ ಗ್ರಾಮದಲ್ಲಿ ಪೌಷ್ಟಿಕ ತೋಟದ ಕ್ಷೇತ್ರೋತ್ಸವವನ್ನು ಏರ್ಪಡಿಸಲಾಯಿತು. 2020-21 ನೇ ಸಾಲಿನಲ್ಲಿ ಒಟ್ಟು 10 ಪೌಷ್ಠಿಕ ತೋಟಗಳ ಪ್ರಾತ್ಯಕ್ಷಿಕೆಗಳನ್ನು ಮುಂಗಾರಿ ಹಂಗಾಮಿನಲ್ಲಿ ಕೈಗೊಳ್ಳಲಾಗಿತ್ತು. ಈ ನಿಮಿತ್ತ ಶ್ರೀಮತಿ ಬಸಮ್ಮಾ ಸಂಜೀವಪ್ಪಾ ಅಬ್ಬಿಗೇರಿ ಇವರ ಹೊಲದಲ್ಲಿ ಪೌಷ್ಠಿಕ ತೋಟದ ಕ್ಷೇತ್ರೋತ್ಸವವನ್ನು ಏರ್ಪಡಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ಮಂಜುಳ ಬುಡ್ಡೆಪ್ಪನವರ, ಮೇಲ್ವಿಚಾರಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮುಂಡರಗಿ ಇವರು ಮಾತನಾಡಿ ವಿವಿಧ ತರಕಾರಿಗಳನ್ನು ತಮ್ಮ ತಮ್ಮ ಹೊಲಗಳಲ್ಲಿ ಬೆಳೆದು ದಿನ ನಿತ್ಯ ತಾಜಾ ತರಕಾರಿಗಳನ್ನು ಸೇವಿಸಿರಿ. ಅಲ್ಲದೇ ಮಹಿಳೆಯರಲ್ಲಿ ಕಂಡು ಬರುವ ರಕ್ತಹೀನತೆ ಸಮಸ್ಯೆಯನ್ನು ಕಡಿಮೆ ಮಾಡಿ ಸಧೃಡ ಆರೋಗ್ಯವನ್ನು ಪಡೆಯಿರಿ ಎಂದು ತಿಳಿಸಿದರು. ಜೊತೆಗೆ ಮಹಿಳೆ ಮತ್ತು ಮಕ್ಕಳಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿರುವ ಸೌಲಭ್ಯಗಳನ್ನು ಸದುಪಯೋಗ ಮಾಡಿಕೊಳ್ಳಿರಿ ಎಂದು ತಿಳಿಸಿದರು. ಡಾ॥ ಸುಧಾ ಮಂಕಣಿ, ಗೃಹ ವಿಜ್ಞಾನ ತಜ್ಞರು, ಕೆವಿಕೆ ಇವರು ಪೌಷ್ಟಿಕ ತೋಟದ ಪ್ರಾಮುಖ್ಯತೆ ಕುರಿತು ತಿಳಿಸಿದರು. ಅಸಮತೋಲನ ಆಹಾರ, ಅಪೌಷ್ಠಿಕತೆಯಿಂದ ಉಂಟಾಗುತ್ತಿರುವ ತೊಂದರೆಗಳು ಹಾಗೂ ಜೀವನ ಶೈಲಿ ಆಧಾರಿತ ರೋಗಗಳಾದ ಸಕ್ಕರೆ ಕಾಯಿಲೆ, ರಕ್ತದೊತ್ತಡ ಹಾಗೂ ಇನ್ನಿತರ ಸಮಸ್ಯೆಗಳು ಹೆಚ್ಚಾಗುತ್ತಿರುವುದಕ್ಕೆ ಬದಲಾದ ಆಹಾರ ಪದ್ಧತಿ, ಕರಕಲು ತಿಂಡಿಗಳು ಹಾಗೂ ಬೇಕರಿ ಪದಾರ್ಥಗಳೇ ಕಾರಣ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ಸಾಂಪ್ರದಾಯಕ ಆಹಾರಗಳು, ಹಣ್ಣು ತರಕಾರಿಗಳು, ಮೊಳಕೆ ಬರಿಸಿದ ಕಾಳುಗಳು, ಹಾಲು, ಹೈನೋತ್ಪನ್ನಗಳನ್ನು ಹಾಗೂ ಸಿರಿಧಾನ್ಯಗಳಾದ ನವಣೆ, ರಾಗಿ, ಸಜ್ಜೆ, ಹಾರಕ, ಕೊರಲೆ ಧಾನ್ಯಗಳನ್ನು ದಿನನಿತ್ಯ ಬಳಸಿ ಉತ್ತಮ ಆರೋಗ್ಯವನ್ನು ಪಡೆಯಿರಿ ಎಂದು ತಿಳಿಸಿದರು. ಈ ಪೌಷ್ಠಿಕ ತೋಟದ ಪ್ರಾತ್ಯಕ್ಷಿಕೆಯಲ್ಲಿ ವಿವಿಧ ಸೊಪ್ಪಿನ ತರಕಾರಿಗಳ ಬೀಜಗಳು, ಇತರೆ ತರಕಾರಿಗಳು, ಔಷಧೀಯ ಗಿಡಗಳು, ಮಸಾಲೆ, ಶ್ರೇಷ್ಠ ಆಹಾರ ಧಾನ್ಯವಾದ ಚಿಯಾ ಬೀಜವನ್ನು ಹಾಗೂ ಹಣ್ಣಿನ ಗಿಡಗಳನ್ನು ಪೌಷ್ಠಿಕ ತೋಟದಲ್ಲಿ ಬೆಳೆಯಲಾಗಿದೆ. ಕ್ಷೇತ್ರೋತ್ಸವದಲ್ಲಿ ಪೌಷ್ಠಿಕ ತೋಟಕ್ಕೆ ಕ್ಷೇತ್ರ ಭೆಟ್ಟಿಯನ್ನು ಏರ್ಪಡಿಸಲಾಯಿತು. ಬದನೆಕಾಯಿ ಹಾಗೂ ಟೊಮ್ಯಾಟೊ ಸಸಿಗಳನ್ನು ಹಾಗೂ ತರಕಾರಿ ಬೀಜಗಳನ್ನು ನೀಡಲಾಯಿತು. ತರಕಾರಿಗಳಲ್ಲಿ ಕಂಡು ಬರುವ ಕೀಟದ ಹತೋಟಿಗಾಗಿ ಹಳದಿ ಅಂಟು ಬಲೆಯ ಮಾಹಿತಿ ನೀಡಿ, ಪ್ರಾತ್ಯಕ್ಷಿಕೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಪೌಷ್ಠಿಕ ಆಹಾರ ಹಾಗೂ ತೋಟದ ಮಾಹಿತಿಗಳನ್ನೊಳಗೊಂಡ ಹಸ್ತಪ್ರತಿಯನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮದ 40 ಜನ ಮಹಿಳೆಯರು ಹಾಗೂ ಅಂಗನವಾಡಿ ಶಿಕ್ಷಕಿಯರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.



## ನರ್ಸರಿ ವರ್ಕರ ತರಬೇತಿ

ಭಾರತೀಯ ಕೃಷಿ ಕೌಶಲ್ಯ ಪರಿಷತ್, ನವದೆಹಲಿ, ಗೋಡಂಬಿ ಹಾಗೂ ಕೊಕೊ ಬೆಳೆ ಅಭಿವೃದ್ಧಿ



ನಿರ್ದೇಶನಾಲಯ, ಕೋಚಿನ ಹಾಗೂ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇವರ ಜಂಟಿ ಸಹಯೋಗದಲ್ಲಿ ದಿನಾಂಕ 17-11-2020 ರಂದು 25 ದಿನಗಳ "ನರ್ಸರಿ ವರ್ಕರ" ಕೌಶಲ್ಯ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರವನ್ನು ಉದ್ಘಾಟಿಸಿದ ಶ್ರೀ ದಾದಾಸಾಹೇಬ್ ದೇಸಾಯಿ, ಉಪ ನಿರ್ದೇಶಕರು, ಡಿ.ಸಿ.ಸಿ.ಡಿ, ಕೋಚಿನ್ ಇವರು ಮಾತನಾಡಿ, ಗದಗ ಜಿಲ್ಲೆಯಲ್ಲಿ ತೋಟಗಾರಿಕೆ ಸಸಿಗಳಿಗೆ ಬಹಳಷ್ಟು ಬೇಡಿಕೆ ಇದ್ದು ಯುವಕರು ನರ್ಸರಿ ಕೌಶಲ್ಯಗಳನ್ನು ಕಲಿತು ಗುಣಮಟ್ಟದ ನರ್ಸರಿ ಸಸಿಗಳನ್ನು ಉತ್ಪಾದಿಸಿ ರೈತರಿಗೆ ಪೂರೈಸಬೇಕೆಂದು ವಿನಂತಿಸಿದರು. ಸುಧಾರಿತ ತಳಿಗಳ ಹಣ್ಣಿನ ಸಸಿಗಳು, ತರಕಾರಿ ಸಸಿಗಳು ಹಾಗೂ ಹೂವಿನ ಸಸಿಗಳ ಸಸ್ಯಾಭಿವೃದ್ಧಿಯನ್ನು, ನೆರಳು ಮನೆ / ಹಸಿರು ಮನೆಯಲ್ಲಿ ಕೈಗೊಳ್ಳಲು ತಿಳಿಸಿದರು. ಇದರ ಜೊತೆಗೆ ವಿವಿಧ ಅಲಂಕಾರಿಕ ಸಸಿಗಳ ಪೂರೈಕೆ ಹಾಗೂ ಸೇವೆಯನ್ನು ಕೈಗೊಳ್ಳಬಹುದೆಂದು ಹೇಳಿದರು. ನರ್ಸರಿ ಉದ್ಯಮದ ಸ್ಥಾಪನೆಗೆ ಬೇಕಾದ ಸಹಾಯ ಸೌಲಭ್ಯವನ್ನು ಡಿ.ಸಿ.ಸಿ.ಡಿ ಇಂದ ಪಡೆಯಬಹುದೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಶಶಿಕಾಂತ ಕೋಟೆಮನಿ, ತೋಟಗಾರಿಕೆ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಗದಗ ಇವರು ನರ್ಸರಿ ಉದ್ಯಮದ ಸ್ಥಾಪನೆಗೆ ಇಲಾಖೆಯ ಯೋಜನೆಯ ಲಾಭ ಪಡೆಯಲು ವಿನಂತಿಸಿದರು. ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ್ದ ಡಾ|| ಎಲ್.ಜಿ.ಹಿರೇಗೌಡರ, ಮುಖ್ಯಸ್ಥರು, ಕೆವಿಕೆ, ಹುಲಕೋಟಿ ಇವರು ನರ್ಸರಿ ಕೌಶಲ್ಯ ತರಬೇತಿ ಉದ್ದೇಶಗಳ ಬಗ್ಗೆ ಮಾತನಾಡಿದರು. ಶ್ರೀ ಸುರೇಶ ಕುಂಬಾರ, ಹಿರಿಯ ತೋಟಗಾರಿಕೆ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಶಿರಹಟ್ಟಿ ಇವರು ಉಪಸ್ಥಿತರಿದ್ದರು. 25 ದಿನಗಳ ಕಾಲ ನಡೆಯುವ ಈ



ತರಬೇತಿಯಲ್ಲಿ ನರ್ಸರಿ ಸ್ಥಾಪನೆ, ಕಸಿ ಕಟ್ಟುವುದು, ಗೂಟಿ ಕಟ್ಟುವುದು, ಹಸಿರು ಮನೆ / ನೆರಳು ಮನೆ ಸ್ಥಾಪನೆ, ನರ್ಸರಿ ನಿರ್ವಹಣೆ, ಅಲಂಕಾರಿಕೆ ಸಸಿಗಳ ಉತ್ಪಾದನೆ ಮುಂತಾದ ವಿಷಯಗಳ ಮೇಲೆ ಕೌಶಲ್ಯವನ್ನು ನೀಡಲಾಗುವುದು. ಜೊತೆಗೆ ಕೃಷಿ ವಿಶ್ವ ವಿದ್ಯಾಲಯದ ಹೈಟೆಕ್ ಹಾರ್ಟಿಕಲ್ಚರ್ ಘಟಕ, ಖಾಸಗಿ ನರ್ಸರಿಗಳು ಹಾಗೂ ತೋಟಗಾರಿಕೆ ಇಲಾಖೆಗಳ ನರ್ಸರಿ ಘಟಕಕ್ಕೆ ಭೆಟ್ಟಿ ಏರ್ಪಡಿಲಾಗುವುದು.

## ಬಹುವಾರ್ಷಿಕ ಮೇವಿನ ಬೆಳೆಗಳ ಹಾಗೂ ಅಜೋಲ್ಲಾ ಉತ್ಪಾದನೆಯ ಕ್ಷೇತ್ರೋತ್ಸವ

ಬಹು ವಾರ್ಷಿಕ ಮೇವಿನ ಬೆಳೆಗಳ ಹಾಗೂ ಅಜೋಲ್ಲಾ ಉತ್ಪಾದನೆಯ ಕ್ಷೇತ್ರೋತ್ಸವ ಐ.ಸಿ.ಎ.ಆರ್-



ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ವತಿಯಿಂದ ದಿನಾಂಕ 20-11-2020 ರಂದು ಶ್ರೀ ಭೀಮಪ್ಪ ಹನಮಂತಪ್ಪ ರೊಡ್ಡನವರ ಸಾ|| ಶಿಂಗಟರಾಯನಕೇರಿ ಇವರ ಹೊಲದಲ್ಲಿ ವಿವಿಧ ಬಹುವಾರ್ಷಿಕ ಮೇವಿನ ತಳಿಗಳಾದ ಹಾಗೂ ಅಜೋಲ್ಲಾ ಉತ್ಪಾದನೆಯ ಕುರಿತು ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಯಿತು. ವಿವಿಧ ಬಹುವಾರ್ಷಿಕ ಹುಲ್ಲಿನ ಬೆಳೆಗಳಾದ ಹೈಬ್ರೀಡ್ ನೇಪಿಯರ್ (ಡಿ.ಎಚ್.ಎನ್-6), ಗಿನಿ ಹುಲ್ಲು, ರ್‍ಹೋಡ್ಸ ಹುಲ್ಲು, ಸಿಗ್ನಲ್ ಹುಲ್ಲು, ಕುದುರೆ ಮೆಂತೆ, ಸ್ಟೈಲೋ ಹೆಮೆಟಾ, ಸ್ಟೈಲೋ ಸ್ಕಾಬ್ರಾ, ಅಲಸಂದಿ ಮತ್ತು ಅಜೋಲ್ಲಾ ಉತ್ಪಾದನೆ ಮುಂಗಾರಿ ಹಂಗಾಮಿನಲ್ಲಿ 3 ಜನ ರೈತರ ಹೊಲಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಾಲಾಗಿದ್ದು ಡಾ.ಬಿ.ಎಮ್.ಮುರಗೋಡ, ಪಶು ಸಂಗೋಪನೆ ಇವರು ಬಹುವಾರ್ಷಿಕ ಹುಲ್ಲಿನ ಬೇಸಾಯ ಹಾಗೂ ಬಳಕೆ ಕುರಿತು ಮಾಹಿತಿಯನ್ನು ನೀಡಿದರು. ಬಹುವಾರ್ಷಿಕ ಹುಲ್ಲಿನ ಬೆಳೆಗಳ ಪ್ರಾತ್ಯಕ್ಷಿಕೆ ಘಟಕಗಳಿಗೆ ರೈತರಿಗೆ ಕ್ಷೇತ್ರ ಭೆಟ್ಟಿಯನ್ನು ಏರ್ಪಡಿಸಿ ಮಾಹಿತಿಯನ್ನು ನೀಡಲಾಯಿತು. ಕ್ಷೇತ್ರೋತ್ಸವದಲ್ಲಿ 28 ಜನ ರೈತರು ಭಾಗವಹಿಸಿದ್ದರು.

## ನವೆಂಬರ್ ತಿಂಗಳಲ್ಲಿ ಆಯೋಜಿಸಲಾದ ತರಬೇತಿಗಳು

| ದಿನಾಂಕ | ವಿಷಯ | ತರಬೇತಿಗಳ ಸಂಖ್ಯೆ | ಭಾಗವಹಿಸಿದವರ ಸಂಖ್ಯೆ |
|---|---|---|---|
| 19-11-2020 | ಸ್ವ-ಸಹಾಯ ಸಂಘಗಳ ಸಾಮರ್ಥ್ಯ ಬಲವರ್ಧನೆ ಮತ್ತು ಆಹಾರ ಧಾನ್ಯಗಳ ಮೌಲ್ಯವರ್ಧನೆ | 1 | 47 |
| 27-11-2020 | ರೈತ ಉತ್ಪಾದಕ ಸಂಘಗಳ ಹುಟ್ಟುವಳಿ, ಪರಿಕಲ್ಪನೆ ಮತ್ತು ಅವಕಾಶಗಳು | 1 | 61 |
| 03, 20 & 27 ನವೆಂಬರ್, 2020 | ಆಹಾರ, ಆರೋಗ್ಯ ಮತ್ತು ಪೌಷ್ಠಿಕ ತೋಟ | 3 | 90 |
| 21-11-2020 | ಕಡಲೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 1 | 40 |
| 10 & 12 ನವೆಂಬರ್ 2020 | ದಿನ ನಿತ್ಯ ಆಹಾರದಲ್ಲಿ ಸಿರಿಧಾನ್ಯಗಳ ಮಹತ್ವ | 2 | 28 |
| 09-11-2020 | ಸಾವಯವ ಪರಿಕರಗಳ ಉತ್ಪಾದನೆ ಮತ್ತು ಮಣ್ಣಿನ ಫಲವತ್ತತೆಯ ನಿರ್ವಹಣೆ | 1 | 26 |
| 26-11-2020 | ಕೊಯ್ಲು ನಂತರದ ತಂತ್ರಜ್ಞಾನಗಳು ಮತ್ತು ಕೆಂಪು ಮೆಣಸಿನಕಾಯಿ ಸಂಗ್ರಹಣೆಯ ವಿಧಾನಗಳು | 1 | 14 |
| 5-7, ನವೆಂಬರ್ 2020 | ವೈಜ್ಞಾನಿಕ ಹೈನುಗಾರಿಕೆ | 1 | 11 |
| 11 & 20 ನವೆಂಬರ್ 2020 | ತೊಗರಿ ಬೆಳೆಯಲ್ಲಿ ಕಾಯಿ ಕೊರಕದ ನಿರ್ವಹಣೆ | 2 | 55 |
| 17-19, ನವೆಂಬರ್ 2020 | ವೈಜ್ಞಾನಿಕ ಆಡು ಮತ್ತು ಕುರಿ ನಿರ್ವಹಣೆ | 1 | 16 |
| 3-4, ನವೆಂಬರ್ 2020 | ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ಮಣ್ಣು, ನೀರು ಮತ್ತು ಬೆಳೆಗಳ ನಿರ್ವಹಣೆ | 1 | 60 |

## ನವೆಂಬರ್ ತಿಂಗಳಲ್ಲಿ ಕೈಗೊಂಡ ಆನ್-ಫಾರ್ಮ ಟ್ರೈಯಲ್ಸ್ ಮತ್ತು ಪ್ರಾತ್ಯಕ್ಷಿಕೆಗಳು

| ಪ್ರಾತ್ಯಕ್ಷಿಕೆಗಳ ವಿವರ | ಕ್ಷೇತ್ರ (ಹೆಕ್ಟೇರ) | ಒಟ್ಟು ರೈತರ ಸಂಖ್ಯೆ | ಗ್ರಾಮಗಳು (ತಾಲೂಕು) |
|---|---|---|---|
| **ಆನ್-ಫಾರ್ಮ ಟ್ರೈಯಲ್ಸ್‌ಗಳು** | | | |
| ಕೆಂಪು ಮೆಣಸಿನಕಾಯಿ ಒಣಗಿಸುವ ವಿವಿಧ ಪದ್ಧತಿಗಳ ತಂತ್ರಜ್ಞಾನ ಪರಿಶೀಲನೆ | - | 3 | ಮಾಡೊಳ್ಳಿ (ಲಕ್ಷ್ಮೇಶ್ವರ) |
| ಕಡಲೆ ಬೆಳೆಯಲ್ಲಿ ಎನ್.ಬಿ.ಜಿ.ಇ-49 ತಳಿಯ ತಂತ್ರಜ್ಞಾನ ಪರಿಶೀಲನೆ | 2 | 5 | ಅರಿಶಿನಗೋಡಿ (ನರಗುಂದ) |
| ಶೇಂಗಾ ಬೆಳೆಯಲ್ಲಿ ಡಿ.ಎಚ್-245 ತಳಿಯ ತಂತ್ರಜ್ಞಾನ ಪರಿಶೀಲನೆ | 2 | 3 | ಶಿಂಗಟರಾಯನಕೇರಿ (ಮುಂಡರಗಿ) |
| **ಮುಂಚೂಣಿ ಪ್ರಾತ್ಯಕ್ಷಿಕೆಗಳು** | | | |
| ಕುಸುಬೆ ಬೆಳೆಯಲ್ಲಿ ಐ.ಎಸ್.ಎಫ್-764 ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 40 | 100 | ಖಾನಾಪೂರ & ಅರಿಷಿಣಗೋಡಿ (ನರಗುಂದ) |

| ಪ್ರಾತ್ಯಕ್ಷಿಕೆಗಳ ವಿವರ | ಕ್ಷೇತ್ರ (ಹೆಕ್ಟೇರ) | ಒಟ್ಟು ರೈತರ ಸಂಖ್ಯೆ | ಗ್ರಾಮಗಳು (ತಾಲೂಕು) |
|---|---|---|---|
| ಗೊಂಚಲು ಪ್ರಾತ್ಯಕ್ಷಿಕೆ-ಶೇಂಗಾ ಬೆಳೆಯಲ್ಲಿ ಡಿ.ಎಚ್-245 ಮತ್ತು ಡಿ.ಎಚ್-256 ತಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 20 | 50 | ಶಿಂಗಟರಾಯನಕೇರಿ (ಮುಂಡರಗಿ) & ಚಿಕ್ಕಸವಣೂರು (ಶಿರಹಟ್ಟಿ) |
| ಹಿರೇಕಾಯಿ ತರಕಾರಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 1 | 5 | ಚಿಕ್ಕಸವಣೂರು (ಶಿರಹಟ್ಟಿ), ಶಿರೋಳ(ಗದಗ) & ಶಿಂಗಟರಾಯನಕೇರಿ(ಮುಂಡರಗಿ) |

## ಕ್ಷೇತ್ರ ಭೆಟ್ಟಿ



ಬಿಳಿ ಉಳ್ಳಾಗಡ್ಡಿ ಬೆಳೆಯಲ್ಲಿ ತಂತ್ರಜ್ಞಾನ ಪರಿಶೀಲನೆ



ತರಕಾರಿ ಬೆಳೆಯಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆ



ಪೌಷ್ಠಿಕ ತೋಟ ಮುಂಚೂಣಿ ಪ್ರಾತ್ಯಕ್ಷಿಕೆ



ತೊಗರಿ ಬೆಳೆಯಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆ – ಎನ್.ಎಫ್.ಎಸ್.ಎಮ್


<u>ಪ್ರಧಾನ ಸಂಪಾದಕರು:</u>
ಡಾ॥ ಎಲ್.ಜಿ.ಹಿರೇಗೌಡರ
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

<u>ಸಂಪಾದಕರು:</u>
ಡಾ॥ ಸುಧಾ ವಿ. ಮಂಕಣಿ
ವಿಷಯ ತಜ್ಞರು (ಗೃಹ ವಿಜ್ಞಾನ)

<u>ಕಾರ್ಯಕ್ರಮಗಳ ಸಂಯೋಜಕರು:</u>
ಶ್ರೀ ವ್ಹಿ.ಡಿ.ವೈಕುಂಠೆ, ವಿಷಯ ತಜ್ಞರು (ಬೇಸಾಯ ಶಾಸ್ತ್ರ)
ಶ್ರೀ ಎಸ್.ಎಚ್. ಆದಾಪೂರ, ವಿಷಯ ತಜ್ಞರು (ಕೃಷಿ ವಿಸ್ತರಣೆ)
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ
ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ)
ಕುಮಾರಿ ಹೇಮಾವತಿ ಹಿರೇಗೌಡರ, ವಿಷಯ ತಜ್ಞರು (ತೋಟಗಾರಿಕೆ)
ಡಾ॥ ಬಿ.ಎಮ್.ಮುರಗೋಡ, ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ)

<u>ವಿನ್ಯಾಸ ಹಾಗೂ ಅಕ್ಷರ ಜೋಡಣೆ:</u>
ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕ ಯಂತ್ರ)

<u>ಸಹಾಯ:</u>
ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು

ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಎಲ್.ಜಿ.ಹಿರೇಗೌಡರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ-582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ
ಫೋನ್: (08372)289606, ಇ-ಅಂಚೆ:kvkhulkoti@gmail.com, ಅಂತರ್‌ಜಾಲ: www.khpkvk.org